ಶ್ರೀ ಮಲ್ಲಿಕಾರ್ಜುನ ಖರ್ಗೆ :– ಮಾನ್ಯ ಅಧ್ಯಕ್ಷರೆ, what was the message you have received ?

ಅಧ್ಯಕ್ಷರು :– ಈಗಾಗಲೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗೃಹ ಸಚಿವರು ಉತ್ತರ ಕೊಟ್ಟಿದ್ದಾರೆ. ಇಲ್ಲಿಗೆ ಈ ಚರ್ಚೆಯನ್ನು ಮುಗಿಸೋಣ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ :– ನಮಗೆ ಸರ್ಕಾರದ ಕಡೆಯಿಂದ ಸ್ಪಷ್ಟವಾದ ಉತ್ತರ ಬಂದಿಲ್ಲ. ಅದಕ್ಕಾಗಿ ನಾವು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು :– ಈಗ ಪ್ರಕಟಣೆ.

ಪ್ರಕಟಣೆ

ಮಾನ್ಯ ಸದಸ್ಯರ ಗೌರವಾರ್ಥ ಮಧ್ಯಾಹ್ನ ಮಾನ್ಯ ಅಶೋಕ್‌ರವರು ಹಾಗೂ ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು ಭೋಜನ ಕೂಟವನ್ನು ಏರ್ಪಡಿಸಿದ್ದಾರೆ. ದಯವಿಟ್ಟು ಎಲ್ಲ ಮಾನ್ಯ ಸದಸ್ಯರು ಬರಬೇಕು.

ಈಗ ಸದನವನ್ನು ಸಂಜೆ 4.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2.48 ಗಂಟೆಗೆ ಮುಕ್ತಾಯಗೊಂಡು ಮತ್ತೆ ಸಂಜೆ 4.00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು 4 ಗಂಟೆ 14 ನಿಮಿಷಕ್ಕೆ ಪ್ರಾರಂಭವಾಯಿತು)

(ಸನ್ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಸಿದ್ದರಾಮಯ್ಯ : ಬೆಲ್ ಹೊಡೆಯುವುದು ಸರಿಯಾಗಿ ಕೇಳಿಸುತ್ತಿಲ್ಲ. ಕೆಂಗಲ್ ಹನುಮಂತಯ್ಯರ ಕಾಲದಲ್ಲಿ ಅದನ್ನು ಹಾಕಿದ್ದಾರೆಂದು ಕಾಣಿಸುತ್ತದೆ. ಅದನ್ನು ಬದಲಾಯಿಸುವುದಿಲ್ಲವೇ ?

ಅಧ್ಯಕ್ಷರು :– ಇಂಪಾಗಿ ಕೇಳಿಸುವಂತೆ ಅದಕ್ಕೆ ಬೇರೆ ಏನಾದರೂ ವ್ಯವಸ್ಥೆ ಮಾಡೋಣ. ಈಗ ಆಯವ್ಯಯದ ಮೇಲೆ ಚರ್ಚೆಯನ್ನು ಮುಂದುವರೆಸೋಣ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :– ಮಾನ್ಯ ಅಧ್ಯಕ್ಷರೆ, ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳುವುದಿಲ್ಲವೆ ?

ಶ್ರೀ ಹೆಚ್.ಸಿ. ಬಾಲಕೃಷ್ಣ : ಇಲ್ಲಿ ಏನಾಗಿದೆ ಎಂದರೆ, ಸದನದ ಅವಧಿಯನ್ನೂ ಸಹ ಮೊಟಕುಗೊಳಿಸಿದ್ದೀರಿ.

ಶ್ರೀ ಉಮೇಶ್ ಕತ್ತಿ :– Question Hourನ್ನು ತೆಗೆದುಕೊಳ್ಳಿ.

ಅಧ್ಯಕ್ಷರು :– ಈಗ Question Hourನ್ನು ತೆಗೆದುಕೊಂಡರೆ ಸಾಯಂಕಾಲದ ವರೆಗೂ ಕೂಡ ಅದೇ ಆಗುತ್ತದೆ. ಈಗ ಬಜೆಟ್ ಮೇಲೆ ಚರ್ಚೆಗೆ ಒಂದು ದಿವಸ ಮಾತ್ರ ಇದೆ. ಬಜೆಟ್ ಮೇಲೆ ಬಹಳಷ್ಟು ಜನರು ಮಾತನಾಡುವವರು ಇದ್ದಾರೆ.

ಶ್ರೀ ರಮಾನಾಥ ರೈ :– ಮೊನ್ನೆ ಮಾನ್ಯ ಸದಸ್ಯರಾದ ಶ್ರೀ ವಸಂತ ಬಂಗೇರಾರವರ ಪ್ರಶ್ನೆ ಇತ್ತು.

ಅಧ್ಯಕ್ಷರು :– ಏನು ಮಾಡುವುದು, ನಾನು ಈ ಬಗ್ಗೆ ಸಜೆಷನ್ ಕೊಡತ್ತೇನೆ. ಇವೊತ್ತು ಮತ್ತೆ ನಾಳೆ ಬಜೆಟ್ ಮೇಲೆ ಚರ್ಚೆ ಮಾಡೋಣ. ನಾಳೆ Question Hour ಇದೆ. 30ನೇ ತಾರೀಖು ಸರ್ಕಾರದಿಂದ ಉತ್ತರವನ್ನು ಕೊಡುತ್ತಾರೆ. ಆವೊತ್ತು ಪಾಸಾದ ಮೇಲೆ...

ಶ್ರೀ ಸಿದ್ದರಾಮಯ್ಯ : Held over questionನ್ನು ಹಾಕಿಬಿಡಿ.

ಅಧ್ಯಕ್ಷರು :– 31ಕ್ಕೆ ಯಾವುದೇ ಬಿಸಿನೆಸ್ ಇಲ್ಲ. ಅಂದು held-over questions ತೆಗೆದುಕೊಳ್ಳೋಣ. ಆವೊತ್ತಿನ ದಿವಸ ಇವೆಲ್ಲವನ್ನೂ ಹಾಕೋಣ. ಕಾಲಿಂಗ್ ಅಟೆನ್‌ಷನ್ ಸಹ ಇದೆ. ನಾನು ಇದರ ಬಗ್ಗೆ ನಿಮಗೆ ಬಿಡುತ್ತೇನೆ. ಈ ವಿಚಾರವನ್ನು ಗೌರವಾನ್ವಿತ ಸದಸ್ಯರಿಗೆ ಬಿಡುತ್ತೇನೆ.

ಶ್ರೀ ರಮಾನಾಥ ರೈ :– ಗಮನಸೆಳೆಯುವ ಸೂಚನೆ ಬಗ್ಗೆ ತಾವು ನಮಗೆ ಭರವಸೆಯನ್ನು ಕೊಟ್ಟಿದ್ದೀರಿ.

ಅಧ್ಯಕ್ಷರು :– ಮಾನ್ಯ ರಮಾನಾಥ ರೈರವರೆ, ತಾವು ನನ್ನ ಮಾತನ್ನು ಕೇಳಿ. ಎಲ್ಲರಿಗೂ ಅವಕಾಶವನ್ನು ಕೊಡೋಣ.

ಶ್ರೀ ರಮಾನಾಥ ರೈ :– ಉತ್ತರ ಬರಲಿಲ್ಲವೆಂದು ನಾವು ಕೇಳುತ್ತಿರುವುದು.

ಅಧ್ಯಕ್ಷರು :– ಯಾವುದಾದರೂ ಚಾಯ್ಸ್‌ನ್ನು ತಾವು ಮಾಡಿ.

ಶ್ರೀ ಸಿದ್ದರಾಮಯ್ಯ :– ಮಾನ್ಯ ಸದಸ್ಯರುಗಳು ಒಪ್ಪುವುದಾದರೆ, ನಾಳೆ ಒಂದೇ ದಿವಸ ಬಜೆಟ್ ಮೇಲೆ ಮತ್ತು ಡಿಮ್ಯಾಂಡ್ಸ್ ಮೇಲೆ ಚರ್ಚೆ ಇರುವುದು, ನಾಡಿದ್ದು ಉತ್ತರವನ್ನು ಕೊಡುತ್ತಾರೆ. 30ನೇ ತಾರೀಖು ಬೆಳಗ್ಗೆ ಇಲ್ಲಿ ಉತ್ತರ ಕೊಟ್ಟಮೇಲೆ, 31ನೇ

ತಾರೀಖು ಇಡೀ ದಿನ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿದೆ. Held-over questions, ಈಗ ಕೇಳಿರುವಂತಹದ್ದು, ಕಾಲಿಂಗ್ ಅಟೆನ್‌ಷನ್‌ಗಳು, ಎಲ್ಲವನ್ನು ಆ ದಿನ ಹಾಕುತ್ತಾರೆ. ಎಲ್ಲವನ್ನು ಆ ದಿನ ಮಾಡಬಹುದು. ಬಜೆಟ್ ಡಿಸ್‌ಕಷನ್‌ಗೆ ಟೈಮ್ ಸಾಲುವುದಿಲ್ಲ. ತಾವು ಯೋಚನೆ ಮಾಡಬೇಕು.

ಅಧ್ಯಕ್ಷರು :– 31ನೇ ತಾರೀಖು ಅವಕಾಶ ಕೊಡುತ್ತೇನೆ. ಈಗ ಮಾನ್ಯ ಪಾಟೀಲ್‌ರವರೆ, ತಾವು ಬಜೆಟ್ ಚರ್ಚೆಯನ್ನು ಪ್ರಾರಂಭಿಸಿ.

4. ವಿತ್ತೀಯ ಕಾರ್ಯಕಲಾಪಗಳು :

2008–2009ನೇ ಸಾಲಿನ ಆಯವ್ಯಯ ಮತ್ತು ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ (ದೇವರಹಿಪ್ಪರಗಿ) :– ಮಾನ್ಯ ಸಭಾಧ್ಯಕ್ಷರೆ, ಮೊಟ್ಟಮೊದಲನೆಯ ಬಾರಿಗೆ ಬಯಲು ಸೀಮೆ ಬರಗಾಲಕ್ಕೆ ಹೆಸುವಾಸಿಯಾದಂತಹ ಬಿಜಾಪುರ ಜಿಲ್ಲೆಯ ದೇವರ ಹಿಪ್ಪರಗಿ ಮತಕ್ಷೇತ್ರದಿಂದ ಮೊದಲ ಬಾರಿಗೆ ಆರಿಸಿಬಂದಂತಹ ನನಗೆ ಈ ಸದನದಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಂತಹ ಸನ್ಮಾನ್ಯ ಸಭಾಧ್ಯಕ್ಷರಿಗೆ ಮತ್ತು ಎಲ್ಲ ಶಾಸಕ ಮಿತ್ರರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಭಾರತೀಯ ಜನತಾ ಪಕ್ಷದ ಸಮ್ಮಿಶ್ರ ಸರ್ಕಾರ ಮಂಡಿಸಿದಂತಹ 2008–09ನೇ ಸಾಲಿನ ಬಜೆಟ್‌ನ್ನು ಅವಲೋಕನೆ ಮಾಡಿದಾಗ...

ಒಬ್ಬ ಮಾನ್ಯ ಸದಸ್ಯರು :– ಸ್ವಾಮಿ ಇದು ಸಮ್ಮಿಶ್ರ ಸರ್ಕಾರವಲ್ಲ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ :– ಇದು ಸಮ್ಮಿಶ್ರ ಸರ್ಕಾರವೇ, ಬಹುಮತವಿಲ್ಲದೆ ಇರುವಂತಹ ಸರ್ಕಾರವನ್ನು ಬಹುಶಃ ಸಮ್ಮಿಶ್ರ ಸರ್ಕಾರವೆಂದರೆ ನನ್ನ ದೃಷ್ಟಿಯಲ್ಲಿ ತಪ್ಪಾಗುವುದಿಲ್ಲ. ಏಕೆಂದರೆ, ಬಹುಶಃ ಹಿಂದಿನ ಚುನಾವಣೆಯಲ್ಲಿ ತಾವು ವೀಕ್ಷಣೆ ಮಾಡಿದರೆ, ಮತಗಳನ್ನು ತೆಗೆದುಕೊಂಡು ನೋಡಿದರೆ ಕಾಂಗ್ರೆಸ್ ಪಕ್ಷ ಭಾರತೀಯ ಜನತಾ ಪಕ್ಷಕ್ಕಿಂತ ಸುಮಾರು 2 ಲಕ್ಷಕ್ಕಿಂತಲೂ ಹೆಚ್ಚು ಮತಗಳನ್ನು ಪಡೆದಿದೆ ಎಂಬುದನ್ನು ನನ್ನ ಶಾಸಕ ಮಿತ್ರರು ಅರ್ಥ ಮಾಡಿಕೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಎರಡನೆಯದಾಗಿ 110 ಸದಸ್ಯರನ್ನು ಹೊಂದಿರುವಂತಹ ಭಾರತೀಯ ಜನತಾ ಪಕ್ಷ ಸಂವಿಧನ ಬದ್ಧವಾಗಿ ಬಹುಮತವನ್ನು ಹೊಂದಿಲ್ಲದಿರುವಂತಹ ಪಕ್ಷ, ಕೆಲವು ಜನ ಸ್ವತಂತ್ರವಾಗಿ ಆರಿಸಿಬಂದಿರುವಂತಹ ಶಾಸಕ ಮಿತ್ರರ ಬೆಂಬಲದಿಂದ ಇವ್ವೊತ್ತು ಸರ್ಕಾರ